ACCOUNTS OF "HUNDIS AND KANIKES" KEPT IN RELIGIOUS INSTITUTIONS

292. Sri K. R. SRINIVASULU NAYADU (Shanthinagar).—

Will the Minister for Revenue be pleased to state:—

(*a*) whther proper accounts are kept in Temples, Mutts, Churches and Mosques of the 'Hundis' 'Kanikes' and other 'offerings' by the devotees;

(*b*) if so, the procedure followed in opening of the 'Hundis' and maintaining the accounts of 'Kanikes and other offerings'?

Sri N. HUTCHAMASTHY GOWDA (Minister for Revenue).—

(*a*) "Hundis" are not usually installed in Churches and Mosques. They are however installed in almost all important Temples and Mutts which are under the Control of the Muzrai Department. Accounts are kept in the temples and mutts in respect of these "Hundis".

(*b*) "Hundis" are kept under lock and seal and they are opened periodically, generally once in 3 months by the responsible officers of the Department in the persence of the Dharmadarsis/ Trustees. The collections are credited to the funds of the respective institutions.

ಶ್ರೀ ಕೆ. ಆರ್. ಎಸ್. ನಾಯ್ಡು.—ತಮ್ಮ ಉತ್ತರದಲ್ಲಿ ದೇವಾಲಯ ಹಾಗೂ ಮಠಗಳಲ್ಲಿ ಹುಂಡಿಗಳ ಬಗ್ಗೆ ಲೆಕ್ಕಗಳನ್ನು ಇಡಲಾಗಿದೆ ಎಂದು ಹೇಳಿದ್ದೀರಿ. ಅದರ ಪ್ರಕಾರ ಒಡವೆ ಮತ್ತು ನಗದು ಹಣ ಎಷ್ಟು ಇದೆ ಎಂಬ ವಿವರಗಳನ್ನು ಕೊಡುತ್ತೀರಾ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯಲ್ಲಿ ಆ ವಿವರಗಳನ್ನು ಕೇಳಿರಲಿಲ್ಲ? ಆದ್ದರಿಂದ ಸದ್ಯದಲ್ಲಿ ಆ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಆರ್. ಎಸ್. ನಾಯ್ಡು.—ಈಗ ಇರತಕ್ಕಂಥ ಹುಂಡಿ ಪದ್ಧತಿಯನ್ನು ತೆಗೆದು ಹಣ ಕೊಟ್ಟವರಿಗೆ ಸ್ಲಿಪ್ ಕೊಡುವ ಪದ್ಧತಿಯನ್ನು ಜಾರಿಗೆ ತರುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹುಂಡಿಗೆ ಬದಲು ಕಾಣಿಕೆ ಕೊಟ್ಟವರಿಗೆ ರಶೀದಿ ಕೊಡುವ ಪದ್ಧತಿಯನ್ನು ಜಾರಿಗೆ ತಂದರೂ ಕೂಡ ಅದನ್ನು ಅನುಸರಿಸದೆ ಹೋದರೆ ಕಷ್ಟವಾಗುತ್ತದೆ. ಆದ್ದರಿಂದ ಹೊಸದಾಗಿ ಯಾವ ಪದ್ಧತಿಯನ್ನು ಜಾರಿಗೆ ತಂದರೂ ಪ್ರಯೋಜನವಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ದೇವಸ್ಥಾನಗಳಲ್ಲಿ ಅರ್ಚಕರು ಕಾಂಟರ್‌ಫಿಟ್ ಹುಂಡಿ ಇಟ್ಟಿರುವುದು ಸರ್ಕಾರದಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಮ್ಮ ಗಮನಕ್ಕೆ ಬಂದಿಲ್ಲ. ಆ ರೀತಿ ಇದ್ದರೆ. ಅದನ್ನು ಸರ್ಕಾರದ ಗಮನಕ್ಕೆ ತಂದರೆ ಕೂಡಲೆ ನೂಕ್ತಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಕೆಲವು ದೇವಸ್ಥಾನಗಳಲ್ಲಿ ಧರ್ಮದರ್ಶಿಗಳು 30—40 ವರ್ಷಗಳಿಂದ ಮುಂದುವರೆದುಕೊಂಡು ಬಂದು ಅವರೇ ಅಧಿಕಾರಿಗಳ ಅಪ್ಪಣೆ ಇಲ್ಲದೆ ಹುಂಡಿಗಳನ್ನು ತೆರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಧರ್ಮದರ್ಶಿಗಳನ್ನು ಆಗಿಂದಾಗ್ಗೆ ಬದಲಾವಣೆ ಮಾಡಬೇಕೆಂದು ನಿಯಮವಿದೆ. ಆ ರೀತಿ ಬಹಳ ಕಾಲದಿಂದ ಬದಲಾವಣೆಯಾಗದೆ ಇರುವುದು ಇದ್ದರೆ, ಅಂಥಾದ್ದನ್ನು ಸರ್ಕಾರದ ಗಮನಕ್ಕೆ ತಂದರೆ ಕೂಡಲೇ ಆ ಕಮಿಟಿಗಳನ್ನು ಬದಲಾವಣೆ ಮಾಡಿ ಅಲ್ಲಿರತಕ್ಕಂಥ ಕ್ರಮಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ದೇವಾಲಯಗಳಲ್ಲಿ ಕಾಣಿಕೆ ಕೊಡುವ ಪದ್ಧತಿ ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಜಾರಿಗೆ ಬಂದಿತು. ಸಾಮಾನ್ಯ ಜನರಿಂದ ಪರೋಕ್ಷ ತೆರಿಗೆಯನ್ನು ತೆಗೆದುಕೊಳ್ಳುವ ಉದ್ದೇಶದಿಂದ ಚಾಣಕ್ಯನು ಈ ಒಂದು ಪದ್ಧತಿಯನ್ನು ಜಾರಿಗೆ ತಂದದ್ದು ತಮಗೆ ಗೊತ್ತಿದೆ. ಆದ್ದರಿಂದ ಈ ಒಂದು ಹಳೆಯ ಪದ್ಧತಿಯನ್ನು ಕೈಬಿಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ಕಾರಕ್ಕೆ ಹಣ ಕೊಡುವಾಗ ಅದು ತೆರಿಗೆಯಾಗುತ್ತದೆ, ದೇವರಿಗೆ ಹಣ ಕೊಡುವಾಗ ಅದು ಕಾಣಿಕೆಯಾಗುತ್ತದೆ. ವ್ಯತ್ಯಾಸ ಇಷ್ಟೆ.

ಶ್ರೀ ಪಿ. ಎಂ. ಬಂಗಿ.— ಉತ್ತರಕರ್ನಾಟಕದ ಭಾಗಗಳಲ್ಲಿರುವ ಮಠ ಮತ್ತು ದೇವಾಲಯಗಳು ಮುಜರಾಯ್ ಇಲಾಖೆಯ ಹತ್ತೋಟಿಯಲ್ಲಿ ಇಲ್ಲ. ಆ ಕಾರಣದಿಂದ ಸರ್ಕಾರದ ಪರವಾಗಿ ಆ ಭಾಗದಲ್ಲಿ ಏನು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಈಗ ಸಭ್ಯದಲ್ಲಿ ಈ ಪ್ರಶ್ನೆಗೂ ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೂ ಸಂಬಂಧವಿಲ್ಲ. ಆದರೂ ಕೂಡ ಅದನ್ನು ಏನು ಮಾಡಬೇಕು ಎಂಬುದನ್ನು ಆಲೋಚನೆ ಮಾಡುವುದಕ್ಕೆ ಸರಿಯಾದಂಥ ಸಲಹೆಯಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ಸರ್ಕಾರದ ಮಂತ್ರಿಗಳೊಬ್ಬರು ಶುಕ್ರವಾರದ ಪೂಜೆಯನ್ನು ಸರ್ಕಾರೀ ಕಛೇರಿಗಳಲ್ಲಿ ಮಾಡಬಾರದೆಂದು ತಿಳಿಸಿದ್ದಾರೆ, ಅದೇ ರೀತಿ ಸರ್ಕಾರದವರು ಎಲ್ಲ ದೇವಸ್ಥಾನಗಳನ್ನು ಮುಚ್ಚುವುದಕ್ಕೆ ಆಲೋಚನೆ ಮಾಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾಸ್ತಿಕರು ಮಂತ್ರಿಮಂಡಲದಲ್ಲಿಯೂ ಇರಬಹುದು, ಶಾಸನಸಭೆಯಲ್ಲಿ ಆ ಕಡೆ ಭಾಗದಲ್ಲಿಯೂ ಇರಬಹುದು, ಈ ಕಡೆ ಭಾಗದಲ್ಲಿಯೂ ಇರಬಹುದು. ಮತ್ತು ಸಾರ್ವಜನಿಕರಲ್ಲಿಯೂ ಇರಬಹುದು. ಇದು ಅವರವರ ನಂಬಿಕೆಯ ಮೇಲೆ ಹೋಗುತ್ತದೆ. ಹೀಗೆಯೇ ಸರಿ, ಹೀಗೆಯೇ ತಪ್ಪು ಎಂದು ಹೇಳುವುದಕ್ಕೆ ಬರುವುದಿಲ್ಲ. ದೇವರಲ್ಲಿ ನಂಬಿಕೆ ಮತ್ತು ವಿಶ್ವಾಸ ಇರುವವರು ಹೆಚ್ಚು ಮಂದಿ ಇರುವುದರಿಂದ ದೇವಸ್ಥಾನಗಳನ್ನು ಮುಚ್ಚಬೇಕಾದ ಅಗತ್ಯವಿಲ್ಲ.

ಶ್ರೀ ಕೆ. ಆರ್. ಎಸ್. ನಾಯ್ಡು—ಸರ್ಕಾರಕ್ಕೆ ಸಿ. ಅಣ್ಣಾರಾವ್ ಅವರು ಈ ಬಗ್ಗೆ ಒಂದು ರಿಪೋರ್ಟ್ ಕೊಟ್ಟಿರುವುದು ತಮ್ಮ ಗಮನದಲ್ಲಿದೆಯೇ ! ತಮ್ಮ ಗಮನದಲ್ಲಿದ್ದರೆ ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ!

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರು ರಿಪೋರ್ಟ್ ಕೊಟ್ಟಿದ್ದಾರೆಂಬುದು ಗೊತ್ತು. ಅದರ ಮೇಲೆ ಇಲ್ಲಿಯವರೆಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ.

ಶ್ರೀ ವಿ. ಎನ್. ಪಾಟೀಲ್.—ಮುಜರಾಯ್ ಇಲಾಖೆಯ ಹತ್ತೋಟಿಯಲ್ಲಿರುವ ಎಲ್ಲ ಪ್ರಮುಖ ದೇವಾಲಯ ಹಾಗೂ ಮಠಗಳಲ್ಲಿ ಹುಂಡಿಗಳನ್ನಿಡಲಾಗಿದೆ. ಆದ್ದರಿಂದ ಬರುವ ಹಣದ ಲೆಕ್ಕವನ್ನು ಸರಿಯಾಗಿ ಇಡಲಾಗಿದೆ ಎಂದು ಹೇಳಿದ್ದೀರಿ. ಆದರೆ ಆ ದೇವಸ್ಥಾನಗಳಿಗೆ ವರ್ಷಕ್ಕೆ ಒಂದು ಸಲವಾದರೂ ಸುಣ್ಣ ಬಳಿಸುತ್ತಿಲ್ಲ. ಅಂದಮೇಲೆ ತಮ್ಮ ಇಲಾಖೆಯವರು ಏನು ಸೂಪರ್ ವಿಷನ್ ಮಾಡುತ್ತಿದ್ದಾರೆಂದು ನಾನು ಕೇಳುತ್ತೇನೆ. ಇದೇ ಪದ್ಧತಿ ಮುಂದುವರೆದರೆ ಮುಂದೆ ಸರ್ಕಾರದ ವಶದಿಂದ ಭಕ್ತಾದಿಗಳೇ ದೇವಸ್ಥಾನಗಳನ್ನು ವಹಿಸಿಕೊಳ್ಳಬಹುದು ಅಥವಾ ದೇವರಲ್ಲಿ ನಂಬಿಕೆಯೇ ಹೋಗಬಹುದು, ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ!

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಬಗ್ಗೆ ಮಾನ್ಯ ಸದಸ್ಯರು ವಿವರವಾದ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕೇಳಿದರೆ ಉತ್ತರ ಹೇಳುತ್ತೇನೆ. ಆದರೆ ಮಾನ್ಯ ಸದಸ್ಯರು ಹೇಳುವ ಹಾಗೆ ಪರಿಸ್ಥಿತಿ ಇಲ್ಲ. ದೇವರಲ್ಲಿ ಭಕ್ತಿ, ತೋರಿಸುವ ವಿಚಾರದಲ್ಲಿ ನಾನಾ ಮಾರ್ಗಗಳು ಇವೆ. ಈ ಬಗ್ಗೆ ಜನರು ಅವರಿಗೆ ಇಷ್ಟವಾದ ಮಾರ್ಗವನ್ನು ಅನುಸರಿಸಬಹುದು.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ಕಾಲ ಮುಗಿಯಿತು.